**ಸಾಕ್ಷಿಯನ್ನು ದಿಃ 12.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ದಿನ ದೊಡ್ಡಯಾಚನಹಳ್ಳಿಯಿಂದ ಹರಿಹರ ಪುರಕ್ಕೆ ನನ್ನ ಯಜಮಾನರು ಹೋಗುತ್ತಿದ್ದರು. ನನ್ನ ಮಗ ಬೈಕ್ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ನನ್ನ ಯಜಮಾನರು ಚಲಾಯಿಸುತ್ತಿದ್ದರು. ನಮ್ಮ ಮೂರು ಅಡ್ಡರಸ್ತೆಯಿಂದ ಮುಖ್ಯರಸ್ತೆಗೆ ಹರಿಹರದ ಪುರದ ಬಳಿ ಜಲಸೂರು ರಸ್ತೆಗೆ ಸೇರುತ್ತೇವೆ ಎಂದರೆ ಸರಿ. ಅಡ್ಡ ರಸ್ತೆಯಿಂದ ಮುಖ್ಯ ರಸ್ತೆಗೆ ಸೇರುವಾಗ ಸಾಮಾನ್ಯವಾಗಿ ನಿಂತು ನೋಡಿ ಸೇರಬೇಕು ಎಂದರೆ ಸರಿ. ಕಚ್ಚಾ ನಕ್ಷೆಯ ಪ್ರಕಾರ ನನ್ನ ಯಜಮಾನರು ಹೈವೆ ರಸ್ತೆಗೆ ಬರುವ ವಾಹನಗಳನ್ನು ಗಮನಿಸದೇ ಏಕಾಏಕಿ ನುಗ್ಗಿದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತ ವಾಹನ ಚಲಾಯಿಸುತ್ತಿದ್ದ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ಯಜಮಾನರು ಚಲಾಯಿಸುತ್ತಿದ್ದರು ಎನ್ನುತ್ತಾರೆ. ಪೋಲೀಸರು ನಮ್ಮ ಬೈಕ್ ಚಾಲಕನ ಮೇಲೆ ಸಹ ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2. ಅರ್ಜಿ ಸಲ್ಲಿಸುವಾಗ ನಾನು ಕೆ.ಆರ್ ಪೇಟೆ ವಾಸಿ ಎಂದು ತೋರಿಸಿದ್ದೇನೆ ಎಂದರೆ ಸರಿ. ನನ್ನ ಮಗ ಬೈಕ್ ಚಲಾಯಿಸುತ್ತಿದ್ದರೂ ಸಹ ಅವನು ಅಪ್ರಾಪ್ತನಾಗಿದ್ದ ಕಾರಣ ನನ್ನ ಯಜಮಾನರು ಬೈಕ್ ಚಲಾಯಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನಮ್ಮ ಬೈಕ್ ಚಾಲಕನ ತಪ್ಪಿನಿಂದ ಆದ ಕಾರಣ 1 ಮತ್ತು 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.